# ಸ್ವಚ್ಛ–ಸ್ವಸ್ಥ ಸಮಾಜ ಇಂದಿನ ಅಗತ್ಯ



**ಗದಗ, ೨ :** ಅವಳಿ ನಗರ ಗದಗ–ಬೆಟಗೇರಿಯನ್ನು ಸ್ವಚ್ಛವಾಗಿಡುವ ಸಂಕಲ್ಪದೊಂದಿಗೆ 'ನಮ್ಮ ನಿರ್ಮಲ ನಗರ' ಹಾಗೂ 'ನಮ್ಮ ಕೈತೋಟ' ಕಾರ್ಯಕ್ರಮಕ್ಕೆ ಗಾಂಧಿ ಜಯಂತಿಯಂದು ನಗರದ ೧೧ನೇ ವಾರ್ಡ್‌ನಲ್ಲಿ ಚಾಲನೆ ನೀಡಲಾಯಿತು.

ವಾರ್ಡ್ ವ್ಯಾಪ್ತಿಯ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ನಡೆದ ಸಮಾರಂಭವನ್ನು ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ.ಪಾಟೀಲ ಅವರು, ವೈಯಕ್ತಿಕ ಆರೋಗ್ಯದಲ್ಲಿ ಅಷ್ಟೇ ಅಲ್ಲ, ದೇಶದ ಅಭಿವೃದ್ಧಿಯಲ್ಲಿ ಸಹ ಸ್ವಚ್ಛ ಹಾಗೂ ಸ್ವಸ್ಥ ಸಮಾಜ ಪ್ರಮುಖ ಪಾತ್ರವಹಿಸುತ್ತದೆ ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು, 'ನಮ್ಮ ನಿರ್ಮಲ ನಗರ' ಹಾಗೂ 'ನಮ್ಮ ಕೈತೋಟ' ಅಭಿಯಾನದ ಭಾಗವಾಗಿ ಒಂದು ವಾರ್ಡ್ ಆಯ್ಕೆ ಮಾಡಿಕೊಂಡು, ಸ್ಥಳೀಯರು ಪಾಲ್ಗೊಳ್ಳುವಂತೆ ಮಾಡಿರುವ ಕಾರ್ಯ ಇತರರಿಗೆ ಮಾದರಿ ಎಂದರು.

ವಿವೇಕ ಪಥದ ಅಧ್ಯಕ್ಷರೂ ಆಗಿರುವ ಮಾಜಿ ಶಾಸಕ ಡಿ.ಆರ್. ಪಾಟೀಲ ಅವರು, ಪ್ರತಿ ಭಾನುವಾರ ಬೆಳಿಗ್ಗೆ ೭.೩೦ರಿಂದ ೯.೩೦ರವರೆಗೆ ಎರಡು ಗಂಟೆಗಳ ಕಾಲ ಶ್ರಮದಾನ ನಡೆಯಲಿದೆ'. ಇದು ಪಕ್ಷಾತೀತ ಕಾರ್ಯಕ್ರಮವಾಗಿದ್ದು, ಎಲ್ಲ ಜಾತಿ, ಪಂಗಡ, ಸಮುದಾಯದ ಜನರು ಕೂಡ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

'ಕಾರ್ಯಕ್ರಮದ'ಲ್ಲಿ ಶ್ರೀ ರಾಮಕೃಷ್ಣ ಮಿಷನ್ ಮತ್ತು ವಿವೇಕಾನಂದ ಆಶ್ರಮದ ಗುರುಗಳಾದ ನಿರ್ಭಯಾನಂದ ಸ್ವಾಮೀಜಿ, ಏಕಗಮ್ಯಾನಂದ ಸ್ವಾಮೀಜಿ ಅವರು ಟೆರೇಸ್ ಗಾರ್ಡನಿಂಗ್ ಮತ್ತು ಕಿಚನ್ ಗಾರ್ಡನಿಂಗ್ ಕುರಿತಾಗಿಯೂ ಮಾಹಿತಿ ನೀಡಿದರು.

ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸಂಗಮೇಶ ದುಂದೂರ, ಜಿಲ್ಲಾಧಿಕಾರಿ ಎಂ.ಸುಂದರೇಶಬಾಬು, ನಗರಸಭೆ ಮಾಜಿ ಅಧ್ಯಕ್ಷರಾದ ಪೀರಸಾಬ ಕೌತಾಳ, ಪ್ರಕಾಶ ಬೊಮ್ಮನಳ್ಳಿ, ಎಲ್.ಡಿ.ಚಂದಾವರಿ, ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ವಿ.ಕೆ.ಗುರುಮಠ, ಕಾಂಗ್ರೆಸ್ ಮುಖಂಡರಾದ ಗುರಣ್ಣ ಬಳಗಾನೂರ, ಪ್ರಭು ಬುರಬುರೆ, ನಗರಸಭೆ ಮಾಜಿ ಉಪಾಧ್ಯಕ್ಷ ಶಂಕರ ಹಾನಗಲ್ಲ, ಮಾಜಿ ಸದಸ್ಯ ಸಿ.ಕೆ.ಮಾಳಶೆಟ್ಟಿ ಸೇರಿ ಅನೇಕರು ವೇದಿಕೆಯಲ್ಲಿದ್ದರು.

### ಅವ್ವ ಸೇವಾ ಟ್ರಸ್ಟ್‌ನಿಂದ ಮಕ್ಕಳ ವಿದ್ಯಾಭ್ಯಾಸದ ಖರ್ಚುವೆಚ್ಚ ಭರಿಸುವ ಭರವಸೆ

# ಆತ್ಮಹತ್ಯೆಗೆ ಯತ್ನಿಸಿದ್ದಾಕೆಗೆ ಹೊರಟ್ಟಿ ಸಾಂತ್ವನ



ಗದಗ: ಇತ್ತೀಚೆಗೆ ಮಲಪ್ರಭಾ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಉಮಾದೇವಿ ಅವರನ್ನು ಸಭಾಪತಿ ಬಸವರಾಜ ಹೊರಟ್ಟಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಗದಗ: ಜಿಲ್ಲೆಯ ಹೊಳೆಆಲೂರಿನಲ್ಲಿ ಮಗುವಿನೊಂದಿಗೆ ಮಲಪ್ರಭಾ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿ, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಉಮಾದೇವಿ ಸಂಗಪ್ಪ ಶೆಲ್ಲಿಕೇರಿ ಅವರನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭೇಟಿ ಮಾಡಿ ಧೈರ್ಯ ತುಂಬಿದರಲ್ಲದೇ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಅವ್ವ ಸೇವಾ ಟ್ರಸ್ಟ್‌ನಿಂದ ಎಲ್ಲ ಖರ್ಚುವೆಚ್ಚಗಳನ್ನು ಭರಿಸಲಾಗುವುದು ಎಂದು ಭರವಸೆ ನೀಡಿದರು.

ನಾಲ್ಕು ತಿಂಗಳ ಹಿಂದೆ ಮಹಾಮಾರಿ ಕೊರೊನಾ ಸೋಂಕಿಗೆ ತಮ್ಮ ಪತಿ ಸಂಗಪ್ಪ ಶೆಲ್ಲಿಕೇರಿ ಬಲಿಯಾಗಿದ್ದಾರೆ. ಖಾಸಗಿ ಅನುದಾನಿತ ಶಾಲೆಯಲ್ಲಿ ಶಿಕ್ಷಕರಾಗಿದ್ದ ಅವರು ಮನೆಯ ಆಧಾರ ಸ್ತಂಭವಾಗಿದ್ದರು. ಅವರ ಅಗಲಿಕೆಯಿಂದ ಮಾನಸಿಕವಾಗಿ ಖಿನ್ನತೆಗೊಳಗಾಗಿ ಮಕ್ಕಳೊಂದಿಗೆ ಆತ್ಮಹತ್ಯೆಗೆ ಯತ್ನಿಸಿದ್ದರಿಂದ ಘೋರ ದುರಂತ ನಡೆದು ಹೋಯಿತು. ಮತ್ಯಾವತ್ತೂ ಈ ರೀತಿಯ ದುಡುಕಿನ ನಿರ್ಧಾರ ತೆಗೆದುಕೊಳ್ಳದೇ ಜೀವನದಲ್ಲಿ ಎದುರಾಗುವ ಸಮಸ್ಯೆ-ಸವಾಲುಗಳನ್ನು ಎದುರಿಸುವುದಾಗಿ ಉಮಾದೇವಿ ಕಣ್ಣೀರಿಟ್ಟರು. ಈ ವೇಳೆ ಉಮಾದೇವಿ ಅವರಿಗೆ ಉತ್ತಮ ಚಿಕಿತ್ಸೆ ನೀಡುವಂತೆ ಸ್ಥಳದಲ್ಲಿದ್ದ ಜಿಮ್ಸ್ ವೈದ್ಯಾಧಿಕಾರಿಗಳಿಗೆ ಸೂಚಿಸಿದರು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ರಾಜಶೇಖರ ಮ್ಯಾಗೇರಿ ಹಾಗೂ ವೈದ್ಯಕೀಯ ಸಿಬ್ಬಂದಿ ಇದ್ದರು.

# ಮಕ್ಕಳೊಂದಿಗೆ ನದಿಗೆ ಹಾರಿದ್ದ ನೊಂದ ಸಂತ್ರಸ್ತೆಗೆ ಸಭಾಪತಿ ಹೊರಟ್ಟಿ ಸಾಂತ್ವನ



**ಗದಗ:** ಮಕ್ಕಳೊಂದಿಗೆ ಮಲಪ್ರಭಾ ನದಿಗೆ ಹಾರಿದ್ದ ನೊಂದ ಸಂತ್ರಸ್ತೆಗೆ ನೀನು ನಮ್ಮ ತಂಗಿ ಸಮ, ಈಗಾದ ತಪ್ಪು ಮತ್ತೊಮ್ಮೆ ಆಗದಿರಲಿ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಸಾಂತ್ವನ ಹೇಳಿದರು.

ಜಿಲ್ಲೆಯ ರೋಣ ತಾಲೂಕಿನ ಹೊಳೆಆಲೂರ ಗ್ರಾಮದ ಉಮಾದೇವಿ ಶೆಲ್ಲಿಕೇರಿ ಎಂಬವರು ಮಕ್ಕಳೊಂದಿಗೆ ಸೆ. 29ರಂದು ಮಲಪ್ರಭಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದರು. ಈ ವೇಳೆ ಮಹಿಳೆ ಪವಾಡ ಸದೃಶ್ಯರೂಪದಂತೆ ಬದುಕುಳಿದಿದ್ದರು. ಈಗ ಆ ಮಹಿಳೆ ಗದಗ ಜಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಲ್ಕು ವರ್ಷದ ಶ್ರೇಷ್ಠಾ ಎಂಬ ಮಗು ಮೃತಪಟ್ಟಿದೆ. ಇಬ್ಬರು ಮಕ್ಕಳು ಬಚಾವ್ ಆಗಿ ಬಂದಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವರಾಜ್ ಹೊರಟ್ಟಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಾಂತ್ವನ ಹೇಳಿದರು.

"ನೀನು ನಮ್ಮ ತಂಗಿ ಸಮ, ಈಗಾದ ತಪ್ಪು ಮತ್ತೊಮ್ಮೆ ಆಗದಿರಲಿ. ಮತ್ತೊಮ್ಮೆ ಜೀವನದಲ್ಲಿ ದುಡುಕಿನ ನಿರ್ಧಾರ ತೆಗೆದುಕೊಳ್ಳಬೇಡ. ನಿಮ್ಮ ಸಹಾಯಕ್ಕೆ ನಾವಿರುತ್ತೇವೆ ಎದೆಗುಂದದಿರು" ಎಂದು ಧೈರ್ಯ ತುಂಬಿದರು.

"ಮಕ್ಕಳನ್ನು ಮುಂದಿಟ್ಟುಕೊಂಡು ಜೀವನ ನಡೆಸಲು ಎಲ್ಲಾ ರೀತಿಯ ಸಹಾಯ ಮಾಡುತ್ತೇವೆ. ಜೀವನದಲ್ಲಿ ಜಿಗುಪ್ಸೆ, ಕಷ್ಟದ ನಿರ್ಧಾರ ಕೈಬಿಡು. ಗಂಡನ ಪೆನ್ಷನ್‌ಗೆ ವ್ಯವಸ್ಥೆ ಮಾಡಿದೆ. ಮಕ್ಕಳ ಶಿಕ್ಷಣ ನೋಡಿಕೊಳ್ಳುತ್ತೇನೆ. ಮತ್ತೊಮ್ಮೆ ಹೀಗೆ ಮಾಡಿದರೆ ನಿನ್ನ ಯಾರೂ ಕ್ಷಮಿಸುವುದಿಲ್ಲ. ಮುಂದೆ ಮಕ್ಕಳು ಕ್ಷಮಿಸುವುದಿಲ್ಲ. ಆ ದೇವರು ಕ್ಷಮಿಸಲ್ಲ. ಮಕ್ಕಳೊಂದಿಗೆ ಮೃತಪಟ್ಟಿದ್ದರೇ ಪರಿಸ್ಥಿತಿ ಏನಾಗುತ್ತಿತ್ತು ಯೋಚಿಸಿದ್ದೀಯಾ?" ಎಂದು ಪ್ರಶ್ನೆ ಮಾಡಿದರು. ಮತ್ತೆ ದುಡುಕಿನ ನಿರ್ಧಾರ ತೆಗೆದುಕೊಳ್ಳಬೇಡ ಎಂದು ಹೊರಟ್ಟಿ ಅವರು ಹೇಳಿದ ಸಾಂತ್ವನಕ್ಕೆ ಮಹಿಳೆ ಕೈ ಮುಗಿದು ಕಣ್ಣೀರಿಟ್ಟರು. ಹೊರಟ್ಟಿಯವರ ಬಳಿ ತನ್ನ ಎರಡು ಮಕ್ಕಳಾದ ತನುಶ್ರೀ ಹಾಗೂ ಅನುಶ್ರೀ ಮಕ್ಕಳನ್ನು ನೋಡಿ ಬಿಕ್ಕಿ ಬಿಕ್ಕಿ ಅತ್ತಳು. ವೈದ್ಯರು ಹಾಗೂ ಸಿಬ್ಬಂದಿಗೆ ಇವರನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಸಲಹೆ ನೀಡಿದರು.

ಇದೇ ವೇಳೆ ಮೂರು ಮಕ್ಕಳ ಶೈಕ್ಷಣಿಕ ಖರ್ಚು ವೆಚ್ಚವನ್ನು ಅವ್ವ ಸೇವಾ ಟ್ರಸ್ಟನಿಂದ ಭರಿಸುವುದಾಗಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಭರವಸೆ ನೀಡಿದರು.

# ಉಮಾದೇವಿ ಶೆಲ್ಲಿಕೇರಿ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಅವ್ವ ಸೇವಾ ಟ್ರಸ್ಟನಿಂದ ಭರಿಸಲಾಗುವುದು : ಹೊರಟ್ಟಿ

**ಗದಗ, ೨ :** ಪತಿ ಶಿಕ್ಷಕ ಸಂಗಪ್ಪ ಕೊರೊನಾ ಸೋಂಕಿನಿಂದ ಕಳೆದ ನಾಲ್ಕು ತಿಂಗಳ ಹಿಂದೆ ಮೃತಪಟ್ಟ ಹಿನ್ನೆಲೆಯಲ್ಲಿ ಸಮಾಜ, ಸಂಬಂಧಿಕರು ಉಮಾದೇವಿ ಸಂಗಪ್ಪ ಶೆಲ್ಲಿಕೇರಿ ಅವರನ್ನು ಕೀಳಾಗಿ ನೋಡುತ್ತಿದ್ದ ಹಿನ್ನೆಲೆಯಲ್ಲಿ ಮನನೊಂದು ಬದುಕಬಾರದೆಂದು ನಿರ್ಧರಿಸಿ ಮಕ್ಕಳ ಸಮೇತ ನದಿಗೆ ಹಾರಿ ಆತ್ಮಹತ್ಯೆಗೆ ಮುಂದಾಗಿದ್ದ ಉಮಾದೇವಿಯವರ ನೋವಿಗೆ ಸ್ಪಂದಿಸುವುದರ ಜೊತೆಗೆ ಅವರ ಮೂರು ಮಕ್ಕಳ ಶೈಕ್ಷಣಿಕ ಖರ್ಚು-ವೆಚ್ಚವನ್ನು ಅವ್ವ ಸೇವಾ ಟ್ರಸ್ಟನಿಂದ ಭರಿಸುವುದಾಗಿ ಕರ್ನಾಟಕ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಹೇಳಿದರು.



ಶನಿವಾರ ಗದಗ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿರುವ ಉಮಾದೇವಿಯವರ ಆರೋಗ್ಯ ವಿಚಾರಿಸಿ ಮಾತನಾಡಿದ ಅವರು, ಶಿಕ್ಷಕರಾಗಿದ್ದ ಪತಿ ಸಂಗಪ್ಪ ಶೆಲ್ಲಿಕೇರಿಯವರು ಕಳೆದ ಎರಡು ದಶಕಗಳಿಂದ ಖಾಸಗಿ ಅನುದಾನಿತ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಕಳೆದ ನಾಲ್ಕು ತಿಂಗಳ ಹಿಂದೆ ಕೊರೊನಾ ಸಂಕಟದಿಂದಾಗಿ ಸಾವನ್ನಪ್ಪಿದ್ದು, ನಮಗೆಲ್ಲರಿಗೂ ನೋವು ತಂದಿದೆ. ಆ ನೋವು ಸಹ ಉಮಾದೇವಿಯವರಿಗೆ ಇರುವುದು ಸಹಜ. ಇಂತಹ ಸಂದರ್ಭದಲ್ಲಿ ಸಮಾಜ, ಬಂಧು-ಬಳಗ ಆತ್ಮಸ್ಥೈರ್ಯ ತುಂಬುವ ಬದಲು ಸ್ಪಂದಿಸದೇ ಇರುವುದು ನೋವಿನ ಸಂಗತಿ. ನೆರೆ-ಹೊರೆಯವರು ಸಹ ಅಷ್ಟಕ್ಕಷ್ಟೇ ಇದ್ದದ್ದು ಸಮಾಜ ಎತ್ತ ಸಾಗುತ್ತಿದೆ ಎಂಬುದನ್ನು ಚಿಂತಿಸಬೇಕಾಗಿದೆ. ಈ ನೋವಿನಿಂದಾಗಿ ಜೊತೆಗೆ ಗಂಡನನ್ನು ಕಳೆದುಕೊಂಡ ಉಮಾದೇವಿಯವರು ಆತ್ಮಹತ್ಯೆ ನಿರ್ಧಾರಕ್ಕೆ ಬಂದಿದ್ದಾರೆ. ದೇವರು ದೊಡ್ಡವನು ಆ ಮೂರು ಮಕ್ಕಳ ಭವಿಷ್ಯಕ್ಕಾಗಿ ಒಂದು ಮಗುವನ್ನು ಬಲಿಪಡೆದು ತಾಯಿಯನ್ನು ಉಳಿಸಿದ್ದು ಪವಾಡವೇ ಸರಿ ಎಂದು ನೋವಿನಿಂದ ಹೇಳಿದರು. ಉಮಾದೇವಿಯವರಿಗೆ ಬುದ್ಧಿಮಾತು ಹೇಳುವುದರ ಜೊತೆಗೆ ನಾಲ್ಕು ಮಕ್ಕಳ ಮುಖವನ್ನಾದರೂ ನೋಡಿ ಎಷ್ಟೇ ಕಷ್ಟ-ನೋವು ಬಂದರೂ ಜೀವನ ಸಾಗಿಸಬೇಕಿತ್ತು. ಇಂತಹ ದುಡುಕಿನ ನಿರ್ಧಾರ ಸರಿಯಲ್ಲ ನಾವೊಬ್ಬ ಸಹೋದರನಾಗಿ ನಿನ್ನ ಎಲ್ಲ ಕಷ್ಟಕಾಲಕ್ಕೂ ನಿನ್ನ ಜೊತೆ ನಾನು ನಿಲ್ಲುತ್ತೇನೆ. ನೀನು ನನ್ನ ಸಹೋದರಿ ಸಮಾನ ಯಾವುದಕ್ಕೂ ಆತಂಕಪಡುವ ಅವಶ್ಯಕತೆ ಇಲ್ಲ. ಏನೇ ಸಮಸ್ಯೆ ಬಂದರೂ ನನ್ನ ಜೊತೆ ಸಂಪರ್ಕದಲ್ಲಿರುವ ನಿನ್ನ ಮುಂದಿನ ಭವಿಷ್ಯ ಹಾಗೂ ಮಕ್ಕಳ ಭವಿಷ್ಯಕ್ಕಾಗಿ ಸದಾಕಾಲ ಸ್ಪಂದಿಸುವೆ. ಅವ್ವ ಸೇವಾ ಟ್ರಸ್ಟ ವತಿಯಿಂದ ಮೂರು ಮಕ್ಕಳ ಶೈಕ್ಷಣಿಕ ಖರ್ಚುವೆಚ್ಚವನ್ನು ನೋಡಿಕೊಳ್ಳುವುದಾಗಿ ಹೇಳಿದರು.

ಉಮಾದೇವಿಯ ಎರಡೂ ಮಕ್ಕಳಿಗೆ ಬಸವರಾಜ ಹೊರಟ್ಟಿಯವರು ಸಾಂತ್ವನ ಹೇಳಿ ನೀವು ಯಾವುದಕ್ಕೂ ಚಿಂತಿಸುವ ಅವಶ್ಯಕತೆ ಇಲ್ಲ. ನಿಮ್ಮೊಂದಿಗೆ ನಾನಿದ್ದೇನೆ. ಸರಿಯಾಗಿ ಶಾಲೆ ಕಲಿತು ದೊಡ್ಡವರಾಗಿ ತಂದೆ ತಾಯಿಗೆ ಕೀರ್ತಿ ತರಬೇಕು. ನಿಮಗೆ ಏನೇ ತೊಂದರೆಯಾದರೂ ನನಗೆ ಹೇಳಿ ಭರವಸೆ ನೀಡಿ ಅಳುತ್ತಿರುವ ಎರಡೂ ಮಕ್ಕಳ ಕಣ್ಣೀರನ್ನು ಒರೆಸಿ, ಕೆಲಹೊತ್ತು ಮಕ್ಕಳೊಂದಿಗೆ ಸಮಯ ಕಳೆದರು. ಇದೊಂದು ಅತ್ಯಂತ ಭಾವನಾತ್ಮಕ ಹೃದಯ ಹಿಂಡುವ ಕ್ಷಣವಾಗಿತ್ತು. ಇದೇ ಸಂದರ್ಭದಲ್ಲಿ ಪ್ರಮುಖ ವೈದ್ಯಾಧಿಕಾರಿಗಳ ಸಭೆ ಮಾಡಿ ಉಮಾದೇವಿಯವರ ಆರೋಗ್ಯ ಸುಧಾರಿಸುವಲ್ಲಿ ವಿಶೇಷ ಕಾಳಜಿ ವಹಿಸಬೇಕೆಂದು ಹೇಳಿದರು. ಬಸವರಾಜ ಹೊರಟ್ಟಿಯವರ ಮಾತಿಗೆ ಸ್ಪಂದಿಸಿದ ಉಮಾದೇವಿ ಮುಂದೆಂದೂ ಇಂತಹ ತಪ್ಪನ್ನು ಮಾಡುವುದಿಲ್ಲ. ದುಡುಕಿನ ನಿರ್ಧಾರದಿಂದ ಎಂಥ ಅವಘಡ ಸಂಭವಿಸಿತು ಎಂದು ಇಂದಿಗೂ ನನಗೆ ಪಾಪಪ್ರಜ್ಞೆ ಕಾಡುತ್ತಿದೆ. ಮಕ್ಕಳೊಂದಿಗೆ ಜೀವನ ನಡೆಸುತ್ತೇನೆಂದು ಹೇಳಿ ಬಸವರಾಜ ಹೊರಟ್ಟಿಯವರಿಗೆ ಕೈಮುಗಿದು ಹೇಳಿ ಕಣ್ಣೀರುಹಾಕಿದರು.

## ಆತ್ಮಹತ್ಯೆಗೆ ಮುಂದಾಗಿದ್ದ ಉಮಾದೇವಿ ಶೆಲ್ಲಿಕೇರಿ ನೋವಿಗೆ ಸ್ಪಂದಿಸುವ ಸಭಾಪತಿ ಬಸವರಾಜ ಹೊರಟ್ಟಿ

# ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಅವ್ವ ಸೇವಾ ಟ್ರಸ್ಟನಿಂದ

**ಗದಗ, 2:** ಪತಿ ಶಿಕ್ಷಕ ಸಂಗಪ್ಪ ಕೂಡ ಕರೋನಾ ಸೋಂಕಿನಿಂದ ಕಳೆದ ನಾಲ್ಕು ತಿಂಗಳ ಹಿಂದೆ ಮೃತಪಟ್ಟ ಹಿನ್ನೆಲೆಯಲ್ಲಿ ಸಮಾಜ, ಸಂಬಂಧಿಕರು ಉಮಾದೇವಿ ಸಂಗಪ್ಪ ಶೆಲ್ಲಿಕೇರಿ ಅವರನ್ನು ಕೀಳಾಗಿ ನೋಡುತ್ತಿದ್ದ ಹಿನ್ನೆಲೆಯಲ್ಲಿ ಮನನೊಂದು ಬದುಕಬಾರದೆಂದು ನಿರ್ಧರಿಸಿ, ಮಕ್ಕಳ ಸಮೇತ ನದಿಗೆ ಹಾರಿ ಆತ್ಮಹತ್ಯೆಗೆ ಮುಂದಾಗಿದ್ದ ಉಮಾದೇವಿಯವರ ನೋವಿಗೆ ಸ್ಪಂದಿಸುವುದರ ಜೊತೆಗೆ ಅವರ ಮೂರು ಮಕ್ಕಳ ಶೈಕ್ಷಣಿಕ ಖರ್ಚು ವೆಚ್ಚವನ್ನು ಅವ್ವ ಸೇವಾ ಟ್ರಸ್ಟನಿಂದ ಭರಿಸುವುದಾಗಿ ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಹೇಳಿದರು.

ಅವರು ಶನಿವಾರ ಗದಗ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿರುವ ಉಮಾದೇವಿಯವರ ಆರೋಗ್ಯ ವಿಚಾರಿಸಿ ಮಾತನಾಡಿದ ಅವರು ಶಿಕ್ಷಕರಾಗಿದ್ದ ಪತಿ ಸಂಗಪ್ಪ ಶೆಲ್ಲಿಕೇರಿಯವರು ಕಳೆದ ಎರಡು ದಶಕಗಳಿಂದ ಖಾಸಗಿ ಅನುದಾನಿತ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಕಳೆದ ನಾಲ್ಕು ತಿಂಗಳ ಹಿಂದೆ ಕರೋನಾ ಸಂಕಟದಿಂದಾಗಿ ಸಾವನ್ನಪ್ಪಿದ್ದು, ನಮಗೆಲ್ಲರಿಗೂ ನೋವು ತಂದಿದೆ. ಆ ನೋವು ಸಹ ಉಮಾದೇವಿಯವರಿಗೆ ಇರುವುದು ಸಹಜ.



ಇಂತಹ ಸಂದರ್ಭದಲ್ಲಿ ಸಮಾಜ, ಬಂಧುಬಳಗ ಆತ್ಮಸ್ಥೈರ್ಯ ತುಂಬುವ ಬದಲು ಸ್ಪಂದಿಸದೇ ಇರುವುದು ನೋವಿನ ಸಂಗತಿ. ನೆರೆ-ಹೊರೆಯವರು ಸಹ ಆತ್ಮಸ್ಥೈರ್ಯ ಇದ್ದನ್ನು ಸಮಾಜ ಎತ್ತ ಸಾಗುತ್ತಿದೆ ಎಂಬುದನ್ನು ಚಿಂತಿಸಬೇಕಾಗಿದೆ. ಈ ನೋವಿನಿಂದಾಗಿ ಜೊತೆಗೆ ಗಂಡನನ್ನು ಕಳೆದುಕೊಂಡ ಉಮಾದೇವಿಯವರು ಆತ್ಮಹತ್ಯೆ ನಿರ್ಧಾರಕ್ಕೆ ಬಂದಿದ್ದಾರೆ. ದೇವರು ದೊಡ್ಡವನು ಆ ಮೂರು ಮಕ್ಕಳ ಭವಿಷ್ಯಕ್ಕಾಗಿ ಒಂದು ಮಗುವನ್ನು ಬಲಿಪಡೆದು ತಾಯಿಯನ್ನು ಉಳಿಸಿದ್ದು ಪವಾಡವೇ ಸರಿ ಎಂದು ನೋವಿನಿಂದ ಹೇಳಿದರು. ಉಮಾದೇವಿಯವರಿಗೆ ಬುದ್ಧಿ ಮಾತು ಹೇಳುವುದರ ಜೊತೆಗೆ ನಾಲ್ಕು ಮಕ್ಕಳ ಮುಖವನ್ನಾದರೂ ನೋಡಿ ಎಷ್ಟೇ ಕಷ್ಟ ನೋವು ಬಂದರೂ ಜೀವನ ಸಾಗಿಸಬೇಕು. ಇಂತಹ ದುಡುಕಿನ ನಿರ್ಧಾರ ಸರಿಯಲ್ಲ ನಾವೆಲ್ಲ ಸಹೋದರರಾಗಿ ನಿನ್ನ ಎಲ್ಲ ಕಷ್ಟ ಕಾಲಕ್ಕೂ ನಿನ್ನ ಜೊತೆ ನಾವು ನಿಲ್ಲುತ್ತೇವೆ. ನೀನು ನನ್ನ ಸಹೋದರಿ ಸಮಾನ ಯಾವುದಕ್ಕೂ ಆತಂಕ ಪಡುವ ಅವಶ್ಯಕತೆ ಇಲ್ಲ. ಏನೆ ಸಮಸ್ಯೆಬಂದರೂ ನನ್ನ ಜೊತೆ ಸಂಪರ್ಕದಲ್ಲಿರುವ ನಿನ್ನ ಮುಂದಿನ ಭವಿಷ್ಯ ಹಾಗೂ ಮಕ್ಕಳ ಭವಿಷ್ಯಕ್ಕಾಗಿ ಸದಾಕಾಲ ಸ್ಪಂದಿಸುವೆ. ಅವ್ವ ಸೇವಾ ಟ್ರಸ್ಟ ವತಿಯಿಂದ ಮೂರು ಮಕ್ಕಳ ಶೈಕ್ಷಣಿಕ ಖರ್ಚುವೆಚ್ಚವನ್ನು ನೋಡಿಕೊಳ್ಳುವುದಾಗಿ ಹೇಳಿದರು.

ಉಮಾದೇವಿಯ ಎರಡೂ ಮಕ್ಕಳಿಗೆ ಬಸವರಾಜ ಹೊರಟ್ಟಿಯವರು ಸಾಂತ್ವನ ಹೇಳಿ ನೀವು ಯಾವುದಕ್ಕೂ ಚಿಂತಿಸುವ ಅವಶ್ಯಕತೆ ಇಲ್ಲ ನಿಮ್ಮೊಂದಿಗೆ ನಾನಿದ್ದೇನೆ ಸರಿಯಾಗಿ ಶಾಲೆ ಕಲಿತು ದೊಡ್ಡವರಾಗಿ ತಂದೆ ತಾಯಿಗೆ ಕೀರ್ತಿ ತರಬೇಕು ನಿಮಗೆ ಏನೇ ತೊಂದರೆ-ಯಾದರೂ ನನಗೆ ಹೇಳಿ ಭರವಸೆ ನೀಡಿ ಅಳುತ್ತಿರುವ ಎರಡೂ ಮಕ್ಕಳ ಕಣ್ಣೀರನ್ನು ಒರೆಸಿ, ಕೆಲಹೊತ್ತು ಮಕ್ಕಳೊಂದಿಗೆ ಸಮಯ ಕಳೆದರು. ಇದೊಂದು ಅತ್ಯಂತ ಭಾವನಾತ್ಮಕ ಹೃದಯ ಹಿಂಡುವ ಕ್ಷಣವಾಗಿತ್ತು. ಇದೇ ಸಂದರ್ಭದಲ್ಲಿ ಪ್ರಮುಖ ವೈದ್ಯಾಧಿಕಾರಿಗಳ ಸಭೆ ಮಾಡಿ ಉಮಾದೇವಿಯವರ ಆರೋಗ್ಯ ಸುಧಾರಿಸುವಲ್ಲಿ ವಿಶೇಷ ಕಾಳಜಿ ವಹಿಸಬೇಕೆಂದು ಹೇಳಿದರು.

ಬಸವರಾಜ ಹೊರಟ್ಟಿಯವರ ಮಾತಿಗೆ ಸ್ಪಂದಿಸಿದ ಉಮಾದೇವಿ ಮುಂದೆಂದೂ ಇಂತಹ ತಪ್ಪನ್ನು ಮಾಡುವುದಿಲ್ಲ ದುಡುಕಿನ ನಿರ್ಧಾರದಿಂದ ಎಂಥಹ ಅವಘಡ ಸಂಭವಿಸಿತು ಎಂದು ಇಂದಿಗೂ ನನಗೆ ಪಶ್ಚಾತ್ತಾಪ ಕಾಡುತ್ತಿದೆ. ಮಕ್ಕಳೊಂದಿಗೆ ಜೀವನ ನಡೆಸುತ್ತೇನೆಂದು ಹೇಳಿ ಬಸವರಾಜ ಹೊರಟ್ಟಿಯವರಿಗೆ ಕೈಮುಗಿದು ಹೇಳಿ ಕಣ್ಣೀರುಹಾಕಿದರು.

# ಮಕ್ಕಳ ಶೈಕ್ಷಣಿಕ ವೆಚ್ಚ ಭರಿಸುವ ಭರವಸೆ

ಗದಗ: ಆತ್ಮಹತ್ಯೆ ಮಾಡಿಕೊಳ್ಳಲೆಂದು ಮಲಪ್ರಭಾ ನದಿಗೆ ಜಿಗಿದು ಬದುಕುಳಿದು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಉಮಾದೇವಿ ಸಂಗಪ್ಪ ಶೆಲ್ಲಿಕೇರಿ ಅವರನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಉಮಾದೇವಿ ಅವರ ನೋವಿಗೆ ಸ್ಪಂದಿಸುವುದರ ಜತೆಗೆ ಅವರ ಮೂವರು ಮಕ್ಕಳ ಶೈಕ್ಷಣಿಕ ಖರ್ಚು-ವೆಚ್ಚವನ್ನು ಅವ್ವ ಸೇವಾ ಟ್ರಸ್ಟ್‌ನಿಂದ ಭರಿಸುವುದಾಗಿ ಹೊರಟ್ಟಿ ಹೇಳಿದರು. ಸಂಗಪ್ಪ ಶೆಲ್ಲಿಕೇರಿ ಕಳೆದ ಎರಡು ದಶಕಗಳಿಂದ ಖಾಸಗಿ ಅನುದಾನಿತ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಕಳೆದ ನಾಲ್ಕು ತಿಂಗಳ ಹಿಂದೆ ಕರೊನಾ ಸೋಂಕು ತಗುಲಿ ಸಾವನ್ನಪ್ಪಿದ್ದು, ನಮಗೆಲ್ಲರಿಗೂ ನೋವು ತಂದಿದೆ. ಆ ನೋವು ಸಹ ಉಮಾದೇವಿ ಅವರಿಗೆ ಇರುವುದು ಸಹಜ. ಇಂತಹ ಸಂದರ್ಭದಲ್ಲಿ ಸಮಾಜ, ಬಂಧು-ಬಳಗ ಆತ್ಮಸ್ಥೈರ್ಯ ತುಂಬಬೇಕಿತ್ತು. ಆದರೆ, ಇವರ ಸಮಸ್ಯೆಗೆ ಯಾರೂ ಸ್ಪಂದಿಸದಿರುವುದು ನೋವಿನ ಸಂಗತಿ ಎಂದರು.



ಗದಗ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಉಮಾದೇವಿ ಶೆಲ್ಲಿಕೇರಿ ಅವರ ಆರೋಗ್ಯ ವಿಚಾರಿಸಿದ ಸಭಾಪತಿ ಬಸವರಾಜ ಹೊರಟ್ಟಿ.